೬೬ ಕೆ.ವಿ. ಸಬ್ ಸ್ಟೇಷನ್

1787 (935); ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ 66 ಕೆ.ವಿ. ಸಬ್‌ಸ್ಟೇಷನ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಾದರೆ ಯಾವ್ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ;

ಇ) ಯಾವ ಕಾಲಮಿತಿಯಲ್ಲಿ ಸ್ಥಾಪಿಸಲಾಗುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ), ಆ) ಮತ್ತು ಇ) ಹೌದು, ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ (1) ಹೊಸಪಾಳ್ಯ ಸರ್ಕಲ್, (2) ಮತ್ತಿಕೆರೆ ಮತ್ತು (3) ಶ್ರೀಗಿರಿಪುರ ಈ ಮೂರು ಸ್ಥಳಗಳಲ್ಲಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮುಂದೆ ಇದ್ದು, ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.

ಕೆ.ಸಿ.ಸಿ. ಬ್ಯಾಂಕ್ ಲಿ., ಧಾರವಾಡದ ಬಗ್ಗೆ

1788 (2080); ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಅ) ಮೆ: ವರದಾ ಶುಗರ್ಸ್ ಡಂಬರಮತ್ತೂರು ಇವರಿಗೆ ಕೆ.ಸಿ.ಸಿ. ಬ್ಯಾಂಕ್ ಲಿ., ಧಾರವಾಡ ವತಿಯಿಂದ ಸಾಲ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದರೆ, ಯಾವಾಗ ಮತ್ತು ಎಷ್ಟು ಸಾಲವನ್ನು ನೀಡಲಾಗಿದೆ; ಈಗ ಸಂಸ್ಥೆಯಿಂದ ಸುಸ್ತಿಯಾಗಿರುವ ಮೊತ್ತವೆಷ್ಟು;

ಆ) ಸಂಸ್ಥೆಯು ಸುಸ್ತಿಯಲ್ಲಿದ್ದರೂ ರಿವೈವಲ್ ಫಂಡ್ ಆಗಿ ಎಷ್ಟು ಹಣವನ್ನು ನೀಡಲಾಗಿದೆ; ರಿವೈವಲ್ ಫಂಡ್ ನೀಡಲು ಕಾರಣವೇನು;

ಇ) ಸಾಲ ವಸೂಲಾತಿಯ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದೆಯೇ ಹಾಗಾದರೆ, ದಾವೆ ಯಾವ ಹಂತದಲ್ಲಿದೆ; ಕೆ.ಸಿ.ಸಿ. ಬ್ಯಾಂಕ್, ಧಾರವಾಡ ಬ್ಯಾಂಕಿನಲ್ಲಿ ಎಷ್ಟು ನಿರ್ದೇಶಕರುಗಳನ್ನು ಅನರ್ಹಗೊಳಿಸಲು ಪ್ರಕರಣ ದಾಖಲಾಗಿದೆ; ಈ ಬ್ಯಾಂಕಿನ ನಿರ್ದೇಶಕರುಗಳು ಇನ್ನೂ ಯಾವ್ಯಾವ ಸಂಸ್ಥೆ, ಸೊಸೈಟಿಗಳಲ್ಲಿ ನಿರ್ದೇಶಕರುಗಳಾಗಿದ್ದಾರೆ.

ಈ) ಸಾಲ ವಸೂಲಾತಿಗೆ ಸರ್ಕಾರವು ಕ್ರಮಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು)

ಅ) ಕೆ.ಸಿ.ಸಿ. ಬ್ಯಾಂಕಿನಿಂದ ಮೆ: ವರದಾ ಶುಗರ್ಸ್ ಡಂಬರಮತ್ತೂರು ಈ ಸಂಸ್ಥೆಗೆ ಸನ್ 1997 ಹಾಗೂ 1998 ರಲ್ಲಿ ₹ 257.00 ಲಕ್ಷ ಸಾಲ ಮಂಜೂರು ಮಾಡಲಾಗಿದೆ. ಸದ್ಯ ದಿನಾಂಕ 31.01.2015 ಕ್ಕೆ ಇದ್ದಂತೆ ₹ 255.25 ಅಸಲು ಮತ್ತು ₹ 867.69 ಬಡ್ಡಿ ಒಟ್ಟಾರೇ ₹ 1122.94 ಬರತಕ್ಕ ಬಾಕಿ ಸಂಪೂರ್ಣ ಸುಸ್ತಿಯಾಗಿರುತ್ತದೆ.

ಆ) ಕೆ.ಸಿ.ಸಿ. ಬ್ಯಾಂಕಿನ ಸ್ವಂತ ಬಂಡವಾಳದಿಂದ ಮೆ: ವರದಾ ಶುಗರ್ಸ್ ಡಂಬರ ಮತ್ತೂರು ಸಂಸ್ಥೆಗೆ ಸಾಲ ವಿತರಿಸಿದ್ದು, ಈ ಸಂಸ್ಥೆಗೆ ಯಾವುದೇ ರಿವೈವಲ್ ಫಂಡ್ ನೀಡಿರುವುದಿಲ್ಲ.

ಇ) ಈ ಸಾಲದ ವಸೂಲಾತಿ ಕುರಿತಂತೆ ಬ್ಯಾಂಕಿನಿಂದ ಪಂಚಾಯತ ದಾವಾ ಕ್ರಮ ಜರುಗಿಸಿದ್ದು, ಈ ವ್ಯಾಜ್ಯದಲ್ಲಿ ಮೆ: ವರದಾ ಶುಗರ್ಸ್ ಸಂಸ್ಥೆಯನ್ನು ಪ್ರತಿವಾದಿಗಳಾಗಿ ಸೇರಿಸಿರುವ ವಿಷಯದಲ್ಲಿ ಕೆಲವು ಪಾಲುದಾರರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ ಬೆಂಗಳೂರು ಇವರ ನ್ಯಾಯಾಲಯದಲ್ಲಿ ಪರಿಶೀಲನಾ ಅರ್ಜಿಗಳನ್ನು ದಾಖಲಿಸಿ ಪಂಚಾಯತ ದಾವೆಯಲ್ಲಿ ಆದ ಮಧ್ಯಂತರ ಆದೇಶಕ್ಕೆ ತಡೆಯಾಜ್ಞೆ

ಪಡೆದುಕೊಂಡಿರುವುದರಿಂದ ವಸೂಲಾತಿ ಪ್ರಕ್ರಿಯೆಗೆ ವಿಳಂಬವಾಗಿರುತ್ತದೆ. ಮುಂದುವರೆದು ಅದೇ ವರದಾ ಶುಗರ್ಸ ಸಂಸ್ಥೆಯ ಕೆಲವು ಪಾಲುದಾರರನ್ನು ವ್ಯಾಜ್ಯದಿಂದ ಕೈಬಿಟ್ಟಿರುವ ಕುರಿತು ಕೆಸಿಸಿ ಬ್ಯಾಂಕಿನವರು ಕೆ ಎ ಟಿ ಯಲ್ಲಿ ಮಧ್ಯಂತರ ಆದೇಶವನ್ನು ಪ್ರಶ್ನಿಸಿದ್ದು, ಅವುಗಳು ವಿಚಾರಣೆಗೊಂಡು ದಿನಾಂಕ 26.10.2013 ರಂದು ಕೆಎಟಿ ನ್ಯಾಯಾಲಯವು ಆದೇಶ ಹೊರಡಿಸಿದೆ. ಆದೇಶದಲ್ಲಿ ಬ್ಯಾಂಕಿನಿಂದ ದಾಖಲಿಸಿದ ರಿವಿಜನ್ ನಂ. 82/01 ನ್ನು ಪುರಸ್ಕರಿಸಿ ಎಲ್ಲ ಪಾಲುದಾರರನ್ನು ಸೇರ್ಪಡೆಗೊಳಿಸಲು ನಿರ್ದೇಶನ ನೀಡಿ ಬಾಕಿ ಪ್ರಕರಣಗಳನ್ನು ವಜಾಗೊಳಿಸಿ ಆದೇಶಿಸಿದೆ. ಹಾಗೂ ಮೇಲ್ಕಂಡ ಪಂಚಾಯ್ತಿ ದಾವಾ ಸಂಖ್ಯೆ 6701/99/2000 ಹಾಗೂ 6702/99/2000, 6703/99/2000 ಗಳನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳುವಂತೆ ಆದೇಶ ಮಾಡಲಾಗಿದೆ.

ವ್ಯಾಜ್ಯ ಸಂಖ್ಯೆ ಜೆಆರ್ಎಲ್:ಬಿ:ಡಿಡಿಎಸ್:6702: 99–00 ಪ್ರಕರಣದ ವಿಚಾರಣೆ ದಿನಾಂಕ: 10.02.2015 ರಂದು ನಿಗದಿಯಾಗಿರುತ್ತವೆ. ಇನ್ನುಳಿದ 2 ಪ್ರಕರಣಗಳು ಜೆಆರ್ಎಲ್:ಬಿ:ಡಿಡಿಎಸ್:6701:99–00 ಮತ್ತು ಜೆಆಎಲ್:ಬಿ:ಡಿಡಿಎಸ್:6703:99–00 ಗಳಿಗೆ ಸಂಬಂಧಿಸಿದಂತೆ ಮೂಲ ಕಡತವು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಿಂದ ವಾಪಸ್ಸು ಬರಬೇಕಾಗಿರುತ್ತದೆ. ಈ ಕಡತಗಳನ್ನು ಪಡೆದುಕೊಂಡು ತ್ವರಿತವಾಗಿ ವಿಚರಣೆ ಪ್ರಾರಂಭಿಸಲಾಗುವುದು.

ಬ್ಯಾಂಕಿನ ಹಾಲಿ ಆಡಳಿತ ಮಂಡಳಿಯಲ್ಲಿ ಇರುವ ಇಬ್ಬರು ನಿರ್ದೇಶಕರಾದ (1) ಶ್ರೀ ಬಾಪುಗೌಡ ದೇಸಾಯಿಗೌಡ ಪಾಟೀಲ, (2) ಶ್ರೀ ಶಿವಕುಮಾರಗೌಡ ಶಿದ್ಧಲಿಂಗನಗೌಡ ಪಾಟೀಲ ಇವರನ್ನು ಬ್ಯಾಂಕಿನ ನಿರ್ದೇಶಕ ಸ್ಥಾನದಿಂದ ಅನರ್ಹಗೊಳಿಸಲು ಪ್ರಕರಣವು ಸಂಯುಕ್ತ ನಿಬಂಧಕರ ಕಚೇರಿಯಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. ಈ ಪ್ರಕರಣವು ವಿಚಾರಣೆಗೊಂಡು ದಿನಾಂಕ; 01.10.2014 ರಂದು ಶ್ರೀ ಬಾಪುಗೌಡ ದೇಸಾಯಿಗೌಡ ಪಾಟೀಲ ಇವರನ್ನು ಕರ್ನಾಟಕ ಸೆಂಟ್ರಲ್

ಕೋ–ಆಪರೇಟಿವ್ ಬ್ಯಾಂಕ್ ಲಿ., ಧಾರವಾಡ ಇದರ ನಿರ್ದೇಶಕ ಸ್ಥಾನದಿಂದ ಐದು ವರ್ಷಗಳ ಅವಧಿಗೆ ಅನರ್ಹಗೊಳಿಸಿ ಆದೇಶ ಮಾಡಲಾಗಿದೆ. ಮುಂದುವರೆದು ಈ ಆದೇಶವನ್ನು ಪ್ರಶ್ನಿಸಿ ಶ್ರೀ ಬಾಪುಗೌಡ ದೇಸಾಯಿಗೌಡ ಪಾಟೀಲ ಇವರು ಗೌ॥ ಉಚ್ಚ ನ್ಯಾಯಾಲಯ ಧಾರವಾಡ ಇವರಲ್ಲಿ ರಿಟ್ ಪಿಟಿಷನ್ ನಂ 109882 / 2014 ನ್ನು ದಾಖಲಿಸಿರುತ್ತಾರೆ.

2. ಶ್ರೀ ಶಿವಕುಮಾರಗೌಡ ಶಿದ್ಧಲಿಂಗನಗೌಡ ಪಾಟೀಲ ಇವರನ್ನು ಬ್ಯಾಂಕಿನ ನಿರ್ದೇಶಕ ಸ್ಥಾನದಿಂದ ಅನರ್ಹಗೊಳಿಸಲು ಸಂಯುಕ್ತ ನಿಬಂಧಕರ ಕಚೇರಿಯಲ್ಲಿ ಪ್ರಕರಣವು ವಿಚಾರಣೆಗೊಂಡು ದಿನಾಂಕ 02.02.2015 ರಂದು ಶ್ರೀ ಶಿವಕುಮಾರಗೌಡ ಶಿದ್ಧಲಿಂಗನಗೌಡ ಪಾಟೀಲ ರವರ ವಿರುದ್ಧ ಕೈಕೊಂಡ 29(ಸಿ) ಕ್ರಮ ಕೈ ಬಿಡಲಾಗಿದೆ ಎಂದು ಆದೇಶವಾಗಿರುತ್ತದೆ.

*ಶ್ರೀ ಬಾಪುಗೌಡ ದೇಸಾಯಿಗೌಡ ಪಾಟೀಲ ಇವರು ಈ ಕೆಳಕಂಡ ಸಂಸ್ಥೆ/ಸಂಘದಲ್ಲಿ ನಿರ್ದೇಶಕರಾಗಿರುತ್ತಾರೆ.

1) ಪ್ರಾಥಮಿಕ ಉತ್ಪಾದಕರ ಸಹಕಾರ ಸಂಘ ನಿ., ಶಲವಡಿ
2) ಹಾಲು ಉತ್ಪಾದಕರ ಸಹಕಾರ ಸಂಘ ನಿ, ಅಮರಗೋಳ
3) ಧಾರವಾಡ ಜಿಲ್ಲಾ ಕೋ–ಆಪ್ ಯುನಿಯನ್ ನಿ., ಧರವಾಡ
4) ಕರ್ನಾಟಕ ರಾಜ್ಯ ಕೋ–ಆಪ್ ಯುನಿಯನ್ ನಿ., ಬೆಂಗಳೂರು
5) ಕೆ.ಸಿ.ಸಿ. ಬ್ಯಾಂಕ ಲಿ., ಧಾರವಾಡ

ಶ್ರೀ ಶಿವಕುಮಾರಗೌಡ ಶಿದ್ಧಲಿಂಗನಗೌಡ ಪಾಟೀಲ ಇವರು ಈ ಕೆಳಕಂಡ ಸಂಸ್ಥೆ/ಸಂಘದಲ್ಲಿ ನಿರ್ದೇಶಕರಾಗಿರುತ್ತಾರೆ.

1) ಕೆ.ಸಿ.ಸಿ. ಬ್ಯಾಂಕ ಲಿ., ಧಾರವಾಡ
2) ಗದಗ ಜಿಲ್ಲಾ ಕೋ–ಆಪ್ ಯುನಿಯ್, ಗದಗ

3) ಮೈಡಗಿರಿ ಸಹಕಾರ ಸಕ್ಕರೆ ಕಾರ್ಖಾನಿ, ಗಂಗಾಪೂರ ತಾ: ಮುಂಡರಗಿ

4) ಪಿಕಾರ್ಡ ಬ್ಯಾಂಕ್ ನಿ., ಮುಂಡರಗಿ

5) ಟಿ.ಎ.ಪಿ.ಸಿ.ಎಂ.ಎಸ್.ನಿ., ಮುಂಡರಗಿ

6) ಮುಂಡರಗಿ ತಾಲೂಕಾ ಕೋ-ಆಪ್ ಅಗ್ರಿಕಲ್ಚರಲ್ ಅಸೋಸಿಯೇಶನ್ ಸೊಸೈಟಿ ನಿ., ಮುಂಡರಗಿ

7) ಗದಗ ವಿಭಾಗ ಮಟ್ಟದ ಕಂಜುಮರ್ಸ ಕೋ-ಆಪ್. ಸೊಸೈಟಿ ನಿ., ಮುಂಡರಗಿ

8) ಮುಂಡರಗಿ ಮನೆ ಕಟ್ಟುವವರ ಸಹಕಾರ ಸಂಘ ನಿ, ಮುಂಡರಗಿ

9) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೀಡನಾಳ ತಾ: ಮುಂಡರಗಿ

ಈ) ಬ್ಯಾಂಕು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದು, ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ.

ನಗರೋತ್ಥಾನ ಯೋಜನೆ

1789 (939); ಶ್ರೀ ಬಣಕಾರ್ ಯು. ಬಿ.

ಅ) ಹಾವೇರಿ ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆಯ ಕಾಮಗಾರಿಗಳಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಕಳಪೆ ಆಗಿರುವ ಬಗ್ಗೆ ಆರೋಪಗಳು ಬಂದಿವೆ; ಅವುಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು;

ಆ) ಬಹಳಷ್ಟು ವಿಳಂಬಗತಿಯಲ್ಲಿ ಕಾಮಗಾರಿಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಆ ಗುತ್ತಿಗೆದಾರನ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?